ಅವುಗಳ ಸೇವನೆಯ ನಂತರ,

"ಜೊಜೊಹಾತುವಿನಲ್ಲಿ ಕಳ್ಳತನವಾಗಿದೆ..." ಅಂಗಡಿಯವ ಹೇಳಿದ.

"ಗೊತ್ತು... ಐದು ಖಾಲಿ ಚೀಲಗಳು..."

"ನಾನು ಅಲ್ಲಿಯೇ ಇದ್ದಿದ್ದರೆ ಹೀಗಾಗುತ್ತಿರಲಿಲ್ಲವೇನೋ! ಬಟ್ಟೆಗಳು ಸಾಕಷ್ಟು ಸಿಕ್ಕಿರುತ್ತಿದ್ದವು ಆದಿವಾಸಿಗಳಿಗೆ. ಹೆಚ್ಚು ಚಳಿಯಾಗುತ್ತಿರಲಿಲ್ಲ. ಆದರೆ..."

"ನನ್ನ ಮೇಲಧಿಕಾರಿ ನಿನ್ನನ್ನು ಭೇಟಿ ಮಾಡಿದ್ದರೆ ಕಷ್ಟವಾಗುತ್ತಿತ್ತು. ನೀನು ಹಂಚಿದ ಬಟ್ಟೆಗಳಿಗೂ, ನಾನು ನಿನಗೆ ನೀಡಿದ ಹಣಕ್ಕೂ ತಾಳೆಯಾಗುತ್ತಿರಲಿಲ್ಲ. ನೀನು ಹಂಚಿದ್ದು 436 ಬಟ್ಟೆ... ಲೆಕ್ಕ ತೋರಿಸಿದ್ದು, ಹಣ ಪಡೆದಿದ್ದು 3,650 ಬಟ್ಟೆಗಳಿಗೆ! ಲಕ್ಷಗಟ್ಟಲೆ ಲಾಭ. ಇನ್ನೂ ಹತ್ತು ವರ್ಷ ಅಲ್ಲಿ ದಿನಸಿ ವ್ಯಾಪಾರ ಮಾಡಿದ್ದರೂ ನಿನಗೆ ಈ ಲಾಭ ಬರುತ್ತಿರಲಿಲ್ಲ. ನನ್ನ ಪಾಲು..."

"ಸ್ವಲ್ಪ ಕೊಟ್ಟಾಗಿದೆಯಲ್ಲ; ಬಾಕಿ ಒಂದೆರಡು ದಿನಗಳಲ್ಲಿ ಕೊಡುತ್ತೇನೆ. ಅಂದಹಾಗೆ, ನನ್ನ ಕಡೆಯವನೊಬ್ಬನಿಗೆ ಜೊಜೊಹಾತುವಿನಲ್ಲಿ ಅಂಗಡಿ ತೆರೆಯುವುದಕ್ಕೆ ಹೇಳಿದ್ದೇನೆ. ಆದರೆ, ಬಟ್ಟೆ ವಿತರಣೆಗೆ ಸಂಬಂಧಿಸಿದ ಹಣದ ವ್ಯವಹಾರ ನಮ್ಮಿಬ್ಬರ ನಡುವೆ ಮಾತ್ರ."

"ಒಳ್ಳೆ ಐಡಿಯ. ವೀ ಆರ್ ಫ್ರೆಂಡ್ಸ್!"

★★★

ಆ ರಾತ್ರಿ... ಗೋದಾಮಿಗೆ ಹೋಗಿ ಐದು ಖಾಲಿ ಚೀಲಗಳನ್ನು ತೆಗೆದುಕೊಂಡು, ಕಾಡಿನಲ್ಲಿದ್ದ ತಮ್ಮ ಗುಡಿಸಿಲಿನತ್ತ ಹೋಗುತ್ತಿದ್ದ ಸಂದರ್ಭದಲ್ಲಿ ಬಾಂಟು ಮತ್ತು ಕತಾನ್ ಸಣ್ಣ ಧ್ವನಿಯಲ್ಲಿ ಮಾತನಾಡಿಕೊಳ್ಳುತ್ತಿದ್ದರು.

ಕತಾನ್ ಕೇಳುತ್ತಿದ್ದ, "ಗೋದಾಮಿನಲ್ಲಿ ನಾವು ಚೆಲ್ಲಿ ಬಂದೆವಲ್ಲ, ಬೂದಿಯಂತಹುದು; ಅದು ಏನು?"

ಬಾಂಟುವಿನ ಉತ್ತರ, "ಅವರು ಅದನ್ನು ಸಿಮೆಂಟ್ ಎಂದು ಕರೆಯುತ್ತಾರೆ..."

"ಸಿಮೆಂಟ್?"

"ಹ್ಞಾ, ಸಿಮೆಂಟ್."

"ಪಕ್ಕಾ ಬೂದಿ, ಬೂದಿ ತುಂಬಿದ ಗೋದಾಮಿಗೆ ಬೀಗ ಬೇರೆ!"

ಕತಾನ್ ಹೇಳುತ್ತಲೇ ಮುಗುಳ್ನಗೆ ಬೀರಿದ. ಬಾಂಟು ಅದಕ್ಕೆ ತನ್ನ ನಗೆಯನ್ನು ಸೇರಿಸಿದ. ಆ ಮುಗುಳ್ನಗೆ ದಟ್ಟ ಅಡವಿಯಲ್ಲಿ, ಕಗ್ಗತ್ತಲಿನಲ್ಲಿ ಲೀನವಾಗಿತ್ತು.

## ನಾಗ ಎಚ್. ಹುಬ್ಳಿ

ಮೂಲತಃ ಹುಬ್ಬಳ್ಳಿಯವರು. ಪತ್ರಿಕೋದ್ಯಮ ಮತ್ತು ಕನ್ನಡದಲ್ಲಿ ಎಂ.ಎ. ಪದವೀಧರ. ಕೆಲಕಾಲ ಪತ್ರಕರ್ತರಾಗಿ ಕೆಲಸ. ಪ್ರಸ್ತುತ ಜಾರ್ಖಂಡ್‌ನ ರಾಂಚಿ ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕ. ಕಳೆದ 14 ವರ್ಷಗಳಿಂದ ಜಾರ್ಖಂಡ್, ಬಿಹಾರ, ಒಡಿಶಾ, ಪಶ್ಚಿಮ ಬಂಗಾಳ, ಛತ್ತೀಸಗಡ, ನಿಕೋಬಾರ್ ದ್ವೀಪ, ಉತ್ತರಾಖಂಡ ಮುಂತಾದ ರಾಜ್ಯಗಳ ಆದಿವಾಸಿಗಳ ನೆಲೆಗಳಿಗೆ ಭೇಟಿ ಕೊಟ್ಟು ಅವರ ಕುರಿತು ಜನಾಂಗೀಯ ಅಧ್ಯಯನ ನಡೆಸುತ್ತಿದ್ದಾರೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಅವರ 'ಸರಹುಲ್' (ನಾಗಪುರಿ ಜನಪದ ಕತೆಗಳು) ಮತ್ತು 'ಜಾರ್ಖಂಡ್ ಆದಿವಾಸಿ ಬದುಕು' ಪುಸ್ತಕಗಳನ್ನು ಪ್ರಕಟಿಸಿದೆ.